O.S.No.371/2018
PW -2

ದಿನಾಂಕ 17/10/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಎಂ.ಎನ್.ಜಿ. ಪ್ರತಿವಾದಿ 7 ಮತ್ತು 9 ರವರ ಪರ ವಕೀಲರಿಂದ**

ವಾದಿಯ ತಂದೆಯನ್ನು ನಾನು ನೋಡಿರುವುದಿಲ್ಲ. ವಾದಿಯ ತಂದೆಗೆ ಎಷ್ಟು ಜನ ಮಕ್ಕಳು ಇರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ವಾದಿಯ ಕುಟಂಬಸ್ಥರನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿ ಲಕ್ಷಮ್ಮ ಮತ್ತು ಅವರ ಮಕ್ಕಳನ್ನು ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ವಾದಿ ತಂದೆ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದ ಬಗ್ಗೆ ನನಗೆ ಗೊತ್ತು. ಸಾಕ್ಷಿ ಮುಂದುವರೆದು 64 ಗುಂಟೆ ಇತ್ತು ಎಂದು ಉತ್ತರಿಸಿರುತ್ತಾರೆ. ಸದರಿ ಸರ್ವೆ ನಂಬರ್ ಗೊತ್ತಿರುವುದಿಲ್ಲ ಆದರೆ ಚಕ್ಕುಬಂದಿ ಗೊತ್ತಿರುತ್ತದೆ. ದಾವಾ ಆಸ್ತಿಯ ಚಕ್ಕುಬಂದಿ ಪೂ- ಚಿಕ್ಕಣ್ಣ ರವರ ಜಮೀನು, ಪ-ರಾಮಕೃಷ್ಣ ವಕೀಲರ ಜಮೀನು, ಉ-ಗೋವಿಂದಪ್ಪ ರವರ ಜಮೀನು, ದ-ಚಿಕ್ಕಣ್ಣ ರವರ ಜಮೀನು ಇರುತ್ತದೆ. ಸದರಿ ಆಸ್ತಿಯನ್ನು ಲಕ್ಷ್ಮಮ್ಮ ಮತ್ತು ರಾಜಣ್ಣ ಇವರು ಸ್ವಾಧೀನದಲ್ಲಿರುತ್ತಾರೆ. ದಾವಾ ಆಸ್ತಿ ವಾದಿಯ ಕುಟುಂಬಕ್ಕೆ ತಿಮ್ಮಯ್ಯ ಎನ್ನುವವರು ಕೊಂಡುಕೊಂಡಿರುತ್ತಾರೆ. ನನಗೆ ವೈಯಕ್ತಿ ಮಾಹಿತಿ ಇರುವುದಿಲ್ಲ. ಆ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ.

2. ರಂಗಶಾಮಣ್ಣ ರವರ ಅಣ್ಣ ತಮ್ಮಂದಿರು ಮೂರು ಜನ ಆದರೆ ಅವರ ಅಕ್ಕ ತಂಗಿಯರ ಬಗ್ಗೆ ಗೊತ್ತಿರುವುದಿಲ್ಲ. ರಂಗಶಾಮಣ್ಣ ರವರ ಅಣ್ಣ ತಮ್ಮಂದಿರು ಗಿರಿಯಪ್ಪ ಮತ್ತು ಗೋವಿಂದಪ್ಪ ಇರುತ್ತಾರೆ. ನಾನು ಗೋವಿಂದಪ್ಪನ್ನು ನೋಡಿರುತ್ತೇನೆ. ರಂಗಶಾಮಣ್ಣ ಮತ್ತು ಗಿರಯಪ್ಪನ್ನು ನೋಡಿರುವುದಿಲ್ಲ. ಅವರ ಮೂರು ಜನ ಅಣ್ಣ ತಮ್ಮಂದಿರ ಕುಟುಂಬಕ್ಕೆ ಎಷ್ಟು ಜಮೀನುಗಳು ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ರಂಗಶಾಮಣ್ಣ ರವರ ಅಣ್ಣ ತಮ್ಮಂದಿರ ನಡುವೆ ವಿಭಾಗ ಆಗಿರುವುದು ನೋಡಿರುವುದಿಲ್ಲ, ಆದರೆ ಮಾರಾಟ ಮಾಡಿ

ಸ್ವಾಧೀನದಲ್ಲಿರುವುದು ಗೊತ್ತಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿಯವರು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಿಭಾಗ ಆಗಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ರಂಗಶಾಮಣ್ಣ ಮತ್ತು ಅವರ ಅಣ್ಣ ತಮ್ಮಂದಿರು ಎಷ್ಟು ವಿಸ್ತೀರ್ಣ, ಚಕ್ಕುಬಂದಿ , ಸರ್ವೆ ನಂಬರ್ ನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಆದರೆ ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಈ ದಾವೆಯನ್ನು ವಾದಿ ತನಗೆ ಭಾಗ ಬೇಕು ಎಂದು ಗುಡ್ಡಸಿದ್ದಮ್ಮ , ರಾಜಣ್ಣ ಮತ್ತು ರಾಮಣ್ಣ ರವರ ವಿರುದ್ಧ ಹೂಡಿರುತ್ತಾರೆ.

3. ವಾದಿಗೆ ಯಾವಾಗ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಅವರ ಮದುವೆ ಆಗಿ ಸುಮಾರು 35 ವರ್ಷಗಳು ಆಗಿರುತ್ತದೆ. ವಾದಿ ಎಷ್ಟು ಆಸ್ತಿಗಳ ಮೇಲೆ ದಾವೆ ಹೂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ವಾದಿಯರ ಕುಟುಂಬಕ್ಕೆ ಒಂದು ಫ್ಲೋರ್ ಮಿಲ್ ಮತ್ತು ಒಂದು ಮನೆ ಇದೆ ಎಂದರೆ ಸರಿ. 1996 ರಿಂದ ರಾಜಣ್ಣ ಮತ್ತು ರಾಮಣ್ಣ ಅವರು ಸ್ವತ್ತುಗಳನ್ನು ಪ್ರತ್ಯೇಕವಾಗಿ ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದಂತೆ ಅವರ ಹೆಸರಿಗೆ ಖಾತೆ ಪಹಣಿ ಅವರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. 6 ನೇ ಪ್ರತಿವಾದಿ ವಾದಿಯನ್ನು ಪ್ರತಿ ಮುದ್ದತ್ತು ದಿನಾಂಕದಂದು ಕರೆದುಕೊಂಡು ಬರುತ್ತಾರೆ ಎಂದರೆ ಸರಿಯಲ್ಲ. ನನ್ನನ್ನು ಮತ್ತು ರಾಜಣ್ಣನನ್ನು ಸಾಕ್ಷಿ ಹೇಳಲು 6 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸಾಕ್ಷಿ ಹೇಳಲು 3 ಭಾರಿ ಬಂದಿರುತ್ತೇನೆ. ರಾಜಣ್ಣನನ್ನು ನಾನು ನೋಡಿರುತ್ತೇನೆ. ರಾಜಣ್ಣ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾನೆ ಎಂದರೆ ಸರಿ. ನಾನು ರಾಜಣ್ಣ ಮತ್ತು ರಾಮಣ್ಣ ರವರ ಜಮೀನನ್ನು ಲಕ್ಷ್ಮಮ್ಮ ಹೇಳಿದ ಮೇರೆಗೆ 4-5 ಗುಂಟೆ ಉಳುಮೆ ಮಾಡಿರುತ್ತೇನೆ. ಆದರೆ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ ಹಾಗೂ ಕಾಗದ ಪತ್ರ ಮಾಡಿಕೊಂಡಿರುವುದಿಲ್ಲ

4. ನಾನು ಉಳುಮೆ ಮಾಡುತ್ತಿದ್ದ 4-5 ಗುಂಟೆ ಜಮೀನಿನ ಚಕ್ಕುಬಂದಿ ಪೂ-ಚಿಕ್ಕಣ್ಣನ ಜಮೀನು , ಪ-ರಾಮಕೃಷಣ ವಕೀಲರು ಇವರ ಜಮೀನು, ಉ-ಗೋವಿಂದಪ್ಪನ ಜಮೀನು , ದ-ಚಿಕ್ಕಣ್ಣ ರವರ ಜಮೀನು ಇರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ನಾನು 4-5 ಗುಂಟೆ ಉಳುಮೆ ಮಾಡುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ಉಳುಮೆ ಮಾಡುತ್ತಿದ್ದ ಜಮೀನಿನಲ್ಲಿ ವಾದಿ ಉಳುಮೆ ಮಾಡಿರುವುದನ್ನು ನಾನು ನೋಡಿರುತ್ತೇನೆ. ಯಾವ ಸಾಲಿನಲ್ಲಿ ಉಳುಮೆ ಮಾಡಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ನಾನು 1992-93 ನೇ ಸಾಲಿನಲ್ಲಿ ಉಳುಮೆ ಮಾಡಿರುತ್ತೇನೆ. ಪ್ರತಿವಾದಿ 1, 2, 5 ಮತ್ತು 6 ರವರು ದಿ. 26/11/1996 ರಲ್ಲಿ ಅವರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ವಿಭಾಗ ಆಗುವ ಮುಂಚೆ ಒಂದೇ ಸರ್ವೆ ನಂಬರ್ ಇತ್ತು ವಿಭಾಗ ಆದ ನಂತರ ಎರಡು ಸರ್ವೆ ನಂಬರ್ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ -1 ನ್ನು ರಾಜಣ್ಣ (6 ನೇ ಪ್ರತಿವಾದಿ) ಇವರು ವಾದ ಪತ್ರದಲ್ಲಿ ಚಕ್ಕುಬಂದಿಯಲ್ಲಿ ನಮೂದಿಸಿದ ಪ್ರಕಾರ ರವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ -2 ನ್ನು ರಾಮಣ್ಣ (5 ನೇ ಪ್ರತಿವಾದಿ) ಇವರು ವಾದ ಪತ್ರದಲ್ಲಿ ಚಕ್ಕುಬಂದಿಯಲ್ಲಿ ನಮೂದಿಸಿದ ಪ್ರಕಾರ ರವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಾವ ಆಸ್ತಿಯ ಪೂರ್ವಕ್ಕೆ ರಾಜಣ್ಣ ಮತ್ತು ಪಶ್ಚಿಮಕ್ಕೆ ಪ್ರತಿವಾದಿ 5 ಮತ್ತು 6 ರವರು ಅನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕ ನನಗೆ ಸೇರಿದ ಜಮೀನು ಇರುವುದಿಲ್ಲ. ದಾವಾ ಆಸ್ತಿಯ ಖಾತೆ ಪಹಣಿ ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 5 ಮತ್ತು 6 ರವರು ವಿಭಾಗ ಮಾಡಿಕೊಂಡಿರುವುದು ವಾದಿಗೆ ಗೊತ್ತು ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

5. ವಾದಿಗೆ ಮದುವೆ ಕಾಲಕ್ಕೆ ಹಣ , ವಡವೆ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿ ಮದುವೆ ಆದಾಗಿನಿಂದ ಆಕೆಯ ಗಂಡನ ಮನೆಯಲ್ಲಿ ವಾಸ ಎಂದರೆ ಸರಿ. 6 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ನಡುವೆ ಜೀವನಾಂಶ ಪ್ರಕರಣ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ರಾಜಣ್ಣನ ಹೆಂಡತಿ ನಮ್ಮ ಗ್ರಾಮದಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ರಾಜಣ್ಣನಿಗೆ ಮೂರು ಜನ ಮಕ್ಕಳು ಅವರುಗಳು ಮಧು , ಶ್ವೇತ , ಪವಿತ್ರ ಇರುತ್ತಾರೆ ರಾಜಣ್ಣನ ಮಗಳು ಪವಿತ್ರ ರಾಜಣ್ಣನ ಭಾಗಕ್ಕೆ ಬಂದ ಆಸ್ತಿಯಲ್ಲಿ ಭಾಗ ಕೊಡುವಂತೆ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಾಜಣ್ಣನ ಮಗಳು ದಾವೆ ಹೂಡಿದ ಕಾರಣ ರಾಜಣ್ಣ ವಾದಿ ಮುಖಾಂತರ ದಾವೆ ಹೂಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಗೆ ಸಹಾಯ ಮಾಡಲು ನಾನು ವಾದಿ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**ಪಾಟೀ ಸವಾಲು - ಪ್ರತಿವಾದಿ 1 ರಿಂದ 6 ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಹಾಗೂ ತಮ್ಮ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ